# ಕರ್ನಾಟಕ ವಿಧಾನ ಪರಿಷತ್ತು

| ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 634 (759) |
| ಸದಸ್ಯರ ಹೆಸರು: | ಶ್ರೀ ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 16-12-2024 |
| ಉತ್ತರಿಸುವವರು: | ಮಾನ್ಯ ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯವು ಶ್ರೀಗಂಧದ ನಾಡೆಂದು ಕೀರ್ತಿ ಪಡೆದಿದ್ದು. ಇಲ್ಲಿರುವ ಶ್ರೀಗಂಧದ ಎಣ್ಣೆ ಉತ್ಪಾದಿಸುವ ಕಾರ್ಖಾನೆಗಳ ಸಂಖ್ಯೆಯೆಷ್ಟು; (ಪೂರ್ಣ ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ಒಂದು ಶ್ರೀಗಂಧದ ಎಣ್ಣೆ ಉತ್ಪಾದಿಸುವ ಕಾರ್ಖಾನೆಯಿರುತ್ತದೆ.<br><br>ಮೈಸೂರು ವಿಭಾಗದಲ್ಲಿ ಮೆ: ಕರ್ನಾಟಕ ಸಾಬೂನು ಮಾರ್ಜಕ ನಿಯಮಿತದ ಶ್ರೀಗಂಧದ ಎಣ್ಣೆ ಉತ್ಪಾದಿಸುವ ಕಾರ್ಖಾನೆ ಇರುತ್ತದೆ. |
| ಆ) | ಶ್ರೀಗಂಧ ಬೆಳೆಯನ್ನು ಪ್ರೋತ್ಸಾಹಿಸಲು ಸರ್ಕಾರ ರೈತರಿಗೆ ಯಾವ ರೀತಿಯಲ್ಲಿ ಸಹಾಯ / ಸೌಲಭ್ಯಗಳನ್ನು ಒದಗಿಸುತ್ತಿದೆ; (ಪೂರ್ಣ ಮಾಹಿತಿ ಒದಗಿಸುವುದು) | ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿಯಲ್ಲಿ ರಿಯಾಯಿತಿ ದರದಲ್ಲಿ ಸಸಿಗಳನ್ನು ವಿತರಿಸುತ್ತಿದ್ದು, ಬದುಕುಳಿದ ಸಸಿಗಳಿಗೆ ಮೊದನೆಯ ವರ್ಷ ರೂ.35/- ಎರಡನೇ ವರ್ಷ ರೂ.40/- ಮತ್ತು ಮೂರನೇ ವರ್ಷ ರೂ.50/- ರಂತೆ ಒಟ್ಟು ರೂ.125/- ಗಳ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ. |
| ಇ) | ಶ್ರೀಗಂಧದ ಮರಗಳನ್ನು ಮಾರಾಟ ಮಾಡಲು ಸರ್ಕಾರದಲ್ಲಿರುವ ನಿಯಮಗಳೇನು; ಶ್ರೀಗಂಧ ಬೆಳೆದ ರೈತನು ತನ್ನ ಮರಗಳನ್ನು ಮಾರಾಟ ಮಾಡಲು ಇರುವ ಸಂಸ್ಥೆಗಳಾವುವು; (ವಿವರವಾಗಿ ಮಾಹಿತಿ ಒದಗಿಸುವುದು) | ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 46 ಎಫ್‌ಡಿಪಿ 2022, ದಿನಾಂಕ 31.12.2022 ರಲ್ಲಿ ಕರ್ನಾಟಕ ಅರಣ್ಯ ನಿಯಮಗಳು, 1969ರ ನಿಯಮ 108ರನ್ವಯ ಶ್ರೀಗಂಧ ಬೆಳೆದ ರೈತನು ಶ್ರೀಗಂಧ ಮರಗಳನ್ನು ಸರ್ಕಾರಿ ಶ್ರೀಗಂಧದ ಕೋಠಿ, ಮೈಸೂರು, ಶಿವಮೊಗ್ಗ, ಧಾರವಾಡ ಇಲ್ಲಿಗೆ ಮಾರಾಟ ಮಾಡಲು ಹಾಗೂ ಇತರೆ ಯಾರಿಗಾದರೂ (any other entity) ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ.<br>ಅದಲ್ಲದೇ, ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 31 ಎಫ್‌ಎಸ್‌ಡಬ್ಲ್ಯೂ 2008, ದಿನಾಂಕ 11.07.2008 ರನ್ವಯ ಶ್ರೀಗಂಧ ಬೆಳೆದ ರೈತನು ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಸಂಸ್ಥೆಗಳಿಗೂ ಸಹ ಮಾರಾಟ ಮಾಡಹುಬದಾಗಿದೆ. |
| ಈ) | ಪ್ರಸ್ತುತವಾಗಿ ದೇವಾಲಯಗಳಲ್ಲಿ ಹಾಗೂ ದರ್ಗಾದ ಉರುಸ್ ಧಾರ್ಮಿಕ ಆಚರಣೆ ಸಂದರ್ಭದಲ್ಲಿ ಗಂಧಕಕ್ಕೆ ತೀವ್ರ ಅಭಾವ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ರಾಜ್ಯದಲ್ಲಿನ ದೇವಾಲಯಗಳು ಹಾಗೂ ಧಾರ್ಮಿಕ ಸಂಸ್ಥೆಗಳು ಸಲ್ಲಿಸುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಸರ್ಕಾರದ ಶ್ರೀಗಂಧ ಕೋಠಿಗಳಲ್ಲಿ ಶ್ರೀಗಂಧ ಲಭ್ಯತೆಯ ಆಧಾರದ ಮೇಲೆ ಶ್ರೀಗಂಧ ಹಂಚಿಕೆ |

| | | |
|---|---|---|
| | | ಮಾಡಲಾಗುತ್ತಿದ್ದು, ಧಾರ್ಮಿಕ ಆಚರಣೆ ಸಂದರ್ಭದಲ್ಲಿ ಪ್ರಸ್ತುತ ಶ್ರೀಗಂಧಕ್ಕೆ ಯಾವುದೇ ಅಭಾವ ಉಂಟಾಗಿರುವುದಿಲ್ಲ.<br><br>ಧಾರ್ಮಿಕ ದತ್ತಿ ಇಲಾಖೆಯಿಂದ 'ಎ' ಮತ್ತು 'ಸಿ' ವರ್ಗಗಳಡಿ ದೇವಸ್ಥಾನಗಳನ್ನು ಗುರುತಿಸಲಾಗಿದೆ. ಅದರಂತೆ, ಸರ್ಕಾರದ ಆದೇಶ ಸಂಖ್ಯೆ : ಅಪಜೀ 192 ಎಫ್‌ಡಿಪಿ 2016, ದಿನಾಂಕ 04.12.2017ರಲ್ಲಿ 333 ದೇವಸ್ಥಾನಗಳನ್ನು ಗುರುತಿಸಲಾಗಿದ್ದು, ಸದರಿ ದೇವಸ್ಥಾನಗಳಲ್ಲಿ 'ಎ' ವರ್ಗದಡಿ ಬರುವ ದೇವಸ್ಥಾನಗಳಿಗೆ 20.00 ಕೆ.ಜಿ ಶ್ರೀಗಂಧ, 'ಬಿ' ವರ್ಗದಡಿ ಬರುವ ದೇವಸ್ಥಾನಗಳಿಗೆ 10.00 ಕೆ.ಜಿ. ಶ್ರೀಗಂಧ ನೀಡಲು ಅವಕಾಶ ಕಲ್ಪಿಸಲಾಗಿದೆ. |
| ಉ) | ಬಂದಿದ್ದಲ್ಲಿ, ಶ್ರೀಗಂಧ ಬೆಳೆಯನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕಾರ್ಯಕ್ರಮಗಳಾವುವು? (ವಿವರ ಒದಗಿಸುವುದು) | ಶ್ರೀಗಂಧ ಬೆಳೆಯನ್ನು ಹೆಚ್ಚಿಸಲು ರೈತರಿಗೆ ಇಲಾಖಾ ವತಿಯಿಂದ ರಿಯಾಯಿತಿ ದರದಲ್ಲಿ ಸಸಿಗಳನ್ನು ವಿತರಿಸಲಾಗುತ್ತಿದ್ದು ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಅಡಿಯಲ್ಲಿ ನೊಂದಾಯಿಸಿಕೊಂಡ ರೈತರು ಅವರ ಜಮೀನಿನಲ್ಲಿ ಶ್ರೀಗಂಧದ ಸಸಿಗಳನ್ನು ನೆಟ್ಟು ಪೋಷಿಸಿದ್ದಲ್ಲಿ, ಬದುಕುಳಿದ ಪ್ರತಿ ಸಸಿಗೆ 3 ವರ್ಷಗಳಲ್ಲಿ ಒಟ್ಟು ರೂ. 125/- ಗಳ ಪ್ರೋತ್ಸಾಹ ಧನವನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ.<br><br>ಇಲಾಖಾ ವತಿಯಿಂದ "ಸಿರಿಚಂದನವನ ಕಾರ್ಯಕ್ರಮದಡಿ ಅರಣ್ಯ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆದಂತಹ ಶ್ರೀಗಂಧದ ಮರಗಳಿಗೆ ರಕ್ಷಣೆ ನೀಡಿ ಪೋಷಣೆ ಮಾಡಲಾಗುತ್ತಿದೆ. ಅಲ್ಲದೇ ಶ್ರೀಗಂಧದ ನೆಡುತೋಪುಗಳನ್ನು ಸಹ ಬೆಳೆಸಿ ಪೋಷಣೆ ಮಾಡಲಾಗುತ್ತಿದೆ. |

ಸಂಖ್ಯೆ: ಅಪಜೀ 35 ಎಫ್‌ಎಸ್ ಡಬ್ಲ್ಯೂ 2024

(signature)

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು